# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ–7372/2014/ಡಿಆರ್‌ಇ–1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 16/5/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಕೆ.ಶಿವಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಜಾಜೂರು ಗ್ರಾಮ ಪಂಚಾಯಿತಿ, ಹಾಲಿ ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯಿತಿ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ, (2) ಶ್ರೀ.ಜಿ.ವಿ.ಪರಮೇಶ್ವರಪ್ಪ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಜಾಜೂರು ಗ್ರಾಮಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, (3) ಶ್ರೀ.ಡಿ.ಸಿ.ಮೋಹನ್, ಅಧ್ಯಕ್ಷರು, ಚಿಕ್ಕಜಾಜೂರು ಗ್ರಾಮಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಮತ್ತು (4) ಶ್ರೀ.ಪಿ.ಎಸ್.ಮೂರ್ತಿ, ಮಾಜಿ ಅಧ್ಯಕ್ಷರು, ಚಿಕ್ಕಜಾಜೂರು ಗ್ರಾಮಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಜಿ.ಎಂ.ಲೋಕೇಶ್ ಬಿನ್ ಮಹಾದೇವಪ್ಪ, ಗಂಜಿಗಟ್ಟೆ, ಮುತ್ತುಗದೂರು ಅಂಚೆ, ಬಿ.ದುರ್ಗ ಹೋಬಳಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ.ಕೆ.ಶಿವಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಜಾಜೂರು ಗ್ರಾಮ ಪಂಚಾಯಿತಿ, ಹಾಲಿ ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯಿತಿ, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ, ಮತ್ತು (2) ಶ್ರೀ.ಜಿ.ವಿ.ಪರಮೇಶ್ವರಪ್ಪ, ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಜಾಜೂರು ಗ್ರಾಮಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ದೂರುದಾರರು ಚಿಕ್ಕಜಾಜೂರು ಗ್ರಾಮಪಂಚಾಯಿತಿಗೆ ದಿ.9/4/2010 ರಿಂದ 14/3/2012 ರವರೆಗೆ ಭಾರತ ನೈರ್ಮಲ್ಯ ಯೋಜನೆಯಡಿ ಅನುದಾನ ಬಿಡುಗಡೆಗೊಂಡಿದ್ದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೇ ಎದುರುದಾರರು ಒಟ್ಟು ರೂ.2,49,800/– ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ 1 ಮತ್ತು 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರುದಾರರು ಮಾಡಿರುವ ಆಪಾದನೆಗಳನ್ನು ಅಲ್ಲಗಳೆಯುವುದರ ಜೊತೆಗೆ,

ಚಿಕ್ಕಜಾಜೂರು ಗ್ರಾಮಪಂಚಾಯಿತಿ 2009-10ನೇ ಸಾಲಿನಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಗ್ರಾಮ ನೈರ್ಮಲೀಕರಣ, ಘನ ತ್ಯಾಜ್ಯ ವಸ್ತುಗಳ ವಿಲೇವಾರಿ, ಶೌಚಾಲಯ ನಿರ್ಮಾಣ, ಬಯಲು ಮಲ ವಿಸರ್ಜನೆ ಮುಕ್ತ ಗ್ರಾಮ ಮುಂತಾದ ಅನೇಕ ಕಾರ್ಯಕ್ರಮಗಳನ್ನು ತಮ್ಮ ಮೇಲಾಧಿಕಾರಿಗಳಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹೊಳಲ್ಕೆರೆ ಇವರ ಮಾರ್ಗದರ್ಶನದಲ್ಲಿ ಹಮ್ಮಿಕೊಂಡು ಯಶಸ್ವಿಯಾಗಿ ಕಾರ್ಯಗತಗೊಳಿಸಿರುವುದಾಗಿ, ಈ ಸಂಬಂಧ ತಮ್ಮ ಮೇಲಾಧಿಕಾರಿಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಗ್ಗೆ ವರದಿಯನ್ನು ಸಹ ಸಲ್ಲಿಸಿರುವುದಾಗಿ ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನೇ ಪುನರುಚ್ಛರಿಸಿರುವುದರ ಜೊತೆಗೆ ಆಕ್ಷೇಪಣೆಯನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ಎದುರುದಾರರು ನಕಲಿ ಅಂಕಪಟ್ಟಿ ನೀಡಿ ಸರ್ಕಾರಿ ಉದ್ಯೋಗ ಗಿಟ್ಟಿಸಿರುವ ಬಗ್ಗೆ ಸಮಾಜ ಪರಿವರ್ತನಾ ಸಮುದಾಯದ ಮುಖಂಡರು ನೀಡಿರುವ ಪ್ರತಿಯನ್ನು ಲಗತ್ತಿಸಿ ಎದುರುದಾರರ ಮೇಲೆ ಕಾನೂನು ಕ್ರಮ ಕೈಗೊಂಡು ದುರುಪಯೋಗವಾಗಿರುವ ಹಣವನ್ನು ವಾಪಸ್ ಪಡೆದು ಅವರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

5) ದೂರುದಾರರ ದೂರಿನ ಬಗ್ಗೆ ತನಿಖೆ ನಡೆದಿ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು ಪೊಲೀಸ್ ನಿರೀಕ್ಷಕರ ಮೂಲಕ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ "ತನಿಖಾಧಿಕಾರಿ ಸಲ್ಲಿಸಿರುವ ವರದಿಯಲ್ಲಿ ಚಿಕ್ಕಜಾಜೂರು ಗ್ರಾಮಪಂಚಾಯಿತಿಯ ಹಿಂದಿನ ಪಿ.ಡಿ.ಓ.,ಗಳಾದ ಶ್ರೀ.ಕೆ.ಶಿವಪ್ಪ, ಮತ್ತು ಶ್ರೀ.ಜಿ.ವಿ.ಪರಮೇಶ್ವರಪ್ಪ, ಅಧ್ಯಕ್ಷರು, ಶ್ರೀ.ಡಿ.ಸಿ.ಮೋಹನ್, ಹಾಗೂ ಮಾಜಿ ಅಧ್ಯಕ್ಷ ಶ್ರೀ.ಪಿ.ಎಸ್.ಮೂರ್ತಿ ಇವರು ಚಿಕ್ಕಜಾಜೂರು ಗ್ರಾಮಪಂಚಾಯಿತಿಗೆ ನಿರ್ಮಲ್ ಭಾರತ್ ಅಭಿಯಾನ ಯೋಜನೆಯಡಿ ಸರ್ಕಾರದಿಂದ ನೀಡಲಾದ ರೂ.2,50,000/- ಗಳ ಪ್ರೋತ್ಸಾಹ ಧನದ ಹಣವನ್ನು ಯಾವುದೇ ಕ್ರಿಯಾ ಯೋಜನೆಯನ್ನು ತಯಾರಿಸದೆ ಹಾಗೂ ಮೇಲಾಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯದೆ ಕಾನೂನು ಬಾಹಿರವಾಗಿ ಸದರಿ ಗ್ರಾಮಪಂಚಾಯಿತಿಯಲ್ಲಿ ಕ್ಲರ್ಕ್-ಕಂ-ಕರವಸೂಲಿಗಾರ ಕರ್ತವ್ಯಕ್ಕೆ ನಿಯೋಜನೆಯಾಗಿರುವ ಶ್ರೀಕಾಂತ ಪ್ರಸಾದ ಇವರ ಹೆಸರಿಗೆ ರೂ.49,800/- ಗಳನ್ನು ಚೆಕ್ ನಂ.104115 ಮತ್ತು ರೂ.2 ಲಕ್ಷಗಳನ್ನು ಚೆಕ್ ನಂ.782671 ಪ್ರಕಾರ ನೀಡಿ ಸದರಿಯವರ ಮುಖಾಂತರ ಒಟ್ಟು ರೂ.2,49,800/- ಗಳನ್ನು ಪಡೆದುಕೊಂಡು ಕಸ ವಿಲೇವಾರಿ ಮಾಡಲು ಗುಂಡಿಗಳನ್ನು ತೋಡಿಸುವುದಕ್ಕಾಗಿ ಮತ್ತು 67 ಕಸದ ತೊಟ್ಟಿಗಳನ್ನು ಖರೀದಿಸುವ ಸಲುವಾಗಿ ಹಣವನ್ನು ಖರ್ಚು ಮಾಡಿರುವುದಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಣ ದುರುಪಯೋಗ ಮಾಡಿರುವ ಬಗ್ಗೆ ವಿಚಾರಣಾಧಿಕಾರಿಯವರ ವರದಿಯಿಂದ ಕಂಡುಬಂದಿರುತ್ತದೆ" ಎಂದು ಹೇಳಿರುತ್ತಾರೆ.

6) ತನಿಖಾಧಿಕಾರಿ ವರದಿಯಲ್ಲಿ ತಿಳಿಸಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಪಂಚಾಯಿತಿಯ ಅಧ್ಯಕ್ಷರಿಗೆ ತನಿಖಾ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ

ಆದೇಶಿಸಲಾಗಿತ್ತು. 1 ಮತ್ತು 4ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಚಿಕ್ಕಜಾಜೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ನೈರ್ಮಲ್ಯ ಕಾಮಗಾರಿ ಹಾಗೂ ತ್ಯಾಜ್ಯ ವಸ್ತುಗಳ ವಿಲೇವಾರಿ ಗುಂಡಿಗಳ ನಿರ್ಮಾಣದ ಕಾಮಗಾರಿಗಳಿಗಾಗಿ ದಿ.9/4/2010 ರಂದು ಚೆಕ್ ನಂ.104115 ಮೊತ್ತ ರೂ.49,800/- ಗಳನ್ನು ಬಳಕೆ ಮಾಡಿರುವುದು ಸತ್ಯವಾಗಿರುತ್ತದೆ. ಪಂಚಾಯಿತಿಯ ನೈರ್ಮಲ್ಯ ಕಾಮಗಾರಿಗಳಿಗೆ ಜೆ.ಸಿ.ಬಿ.ವಾಹನ ಮತ್ತು ಟ್ರಾಕ್ಟರ್ ಸರಬರಾಜು ಮಾಡಿದ ಎಸ್.ಎಂ.ಶೇಖರಪ್ಪ ಇವರು ಬಾಡಿಗೆ ಹಣವನ್ನು ನಗದಾಗಿ ನೀಡುವಂತೆ ಬೇಡಿಕೆ ಇಟ್ಟಿದ್ದರಿಂದ, ಚೆಕ್‌ನ್ನು ಶ್ರೀಕಾಂತ್ ಪ್ರಸಾದ ಇವರ ಹೆಸರಿಗೆ ಬರೆದು ಹಣವನ್ನು ತರಿಸಿಕೊಂಡು ಎಲ್ಲರ ಸಮ್ಮುಖದಲ್ಲಿ ನೀಡಿ ಸ್ವೀಕೃತಿಯನ್ನು ಪಡೆದಿರುತ್ತಾರೆ. ನೈರ್ಮಲ್ಯ ಯೋಜನೆಯಲ್ಲಿ ಅಕ್ರಮ ನಡೆದಿದೆಯೆಂದು ದೂರುದಾರರು ದೂರಿರುವುದು ಸತ್ಯಕ್ಕೆ ದೂರವಾಗಿರುತ್ತದೆ.

7) ಮುಂದುವರೆದು, 2 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.13/3/13 ರಂದು ಗ್ರಾಮಪಂಚಾಯಿತಿ ಅಧ್ಯಕ್ಷರಾದ ಡಿ.ಸಿ.ಮೋಹನ್‌ರವರ ಅಧ್ಯಕ್ಷತೆಯಲ್ಲಿ ಸರ್ವ ಸದಸ್ಯರ ಸಭೆ ಕರೆದು ಸಭೆಯಲ್ಲಿ ಸಾರ್ವಜನಿಕರ ದೂರಿನ ಬಗ್ಗೆ ಚರ್ಚಿಸಿ ಸರ್ವ ಸದಸ್ಯರ ಒಪ್ಪಿಗೆಯ ಮೇರೆಗೆ ನೈರ್ಮಲ್ಯ ಯೋಜನೆಯ ಪ್ರಶಸ್ತಿ ಬಂದ ಹಣ ರೂ.2 ಲಕ್ಷದಲ್ಲಿ ಸಿಮೆಂಟ್ ತೊಟ್ಟಿಗಳನ್ನು ಖರೀದಿಸಲು ತೀರ್ಮಾನ ತೆಗೆದುಕೊಂಡಿರುತ್ತಾರೆ. ಸದರಿ 60 ಸಿಮೆಂಟ್ ತೊಟ್ಟಿಗಳನ್ನು ಸರಬರಾಜು ಮಾಡಿದವರು ನಗದು ಹಣಕ್ಕೆ ಬೇಡಿಕೆ ಇಟ್ಟಿದ್ದರಿಂದ, ದಿ.14/3/2012 ರಂದು ಶ್ರೀಕಾಂತ, ಜವಾನರು, ಗ್ರಾಮಪಂಚಾಯಿತಿ ಚಿಕ್ಕಜಾಜೂರು ಇವರ ಹೆಸರಿಗೆ ಚೆಕ್ ನಂ.782671 ರೂ.2 ಲಕ್ಷದ ಮೊತ್ತದ ಚೆಕ್‌ನ್ನು ಬರೆದು ನಗದನ್ನು ತುಂಗಭದ್ರಾ ಕಾಂಕ್ರೀಟ್ಸ್ ಪ್ರಾಡಕ್ಟ್ಸ್, ಚಿತ್ರದುರ್ಗ ಇವರಿಗೆ ತಲುಪಿಸಲಾಗಿದೆ. ದೂರುದಾರರು ಮಾಡಿರುವ ಆಪಾದನೆ ಸತ್ಯಕ್ಕೆ ದೂರವಾಗಿದೆ ಎಂದು ಹೇಳಿರುತ್ತಾರೆ.

8) ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ತನಿಖಾಧಿಕಾರಿ ವರದಿಯಲ್ಲಿ ತಿಳಿಸಿರುವ 2 ಚೆಕ್‌ಗಳನ್ನು ಗ್ರಾಮಪಂಚಾಯಿತಿಯ ಜವಾನ ಶ್ರೀಕಾಂತ್ ಎನ್ನುವವರ ಹೆಸರಿನಲ್ಲಿ ನೀಡಿರುವುದನ್ನು ಎದುರುದಾರರು ಒಪ್ಪಿಕೊಂಡಿರುತ್ತಾರೆ. ಕಾಮಗಾರಿ ಕೈಗೊಂಡವರು ನಗದು ಹಣ ಬೇಕೆಂದು ಕೇಳಿದ ಕಾರಣ ಶ್ರೀಕಾಂತ್ ರವರ ಹೆಸರಿನಲ್ಲಿ ಚೆಕ್‌ನ್ನು ಬರೆದು ನಗದನ್ನು ಪಡೆದು ಸಾಮಾಗ್ರಿ ಪೂರೈಸಿದವರಿಗೆ ಮತ್ತು ಕಾಮಗಾರಿ ಮಾಡಿದವರಿಗೆ ನೀಡಲಾಗಿದೆಯೆಂದು ತಿಳಿಸಿದ್ದು, ಆದರೆ, ನಿಯಮಗಳನ್ವಯ ಆರೀತಿಯಲ್ಲಿ ಮೊತ್ತವನ್ನು ನೀಡಲು ಅವಕಾಶವಿರುವುದಿಲ್ಲ. ಶ್ರೀಕಾಂತ್ ಎನ್ನುವವರ ಹೆಸರಿಗೆ ನೀಡಲಾದ ಚೆಕ್‌ನ ಹಣವನ್ನು ಸಾಮಾಗ್ರಿಗಳನ್ನು ಖರೀದಿಸಿರುತ್ತಾರೆನ್ನುವುದನ್ನು ಸಾಬೀತು ಪಡಿಸಲು ಯಾವುದೇ ದಾಖಲಾತಿಗಳಿಲ್ಲ. ಅಂತಹ ಸಂದರ್ಭಗಳಲ್ಲಿ ಹಣ ದುರುಪಯೋಗವಾಗಿರುವುದನ್ನು ಸಂಪೂರ್ಣವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಹೇಳಿರುವ ಅಂಶಗಳು ತನಿಖಾಧಿಕಾರಿಯ ವರದಿಯನ್ನು ಅಲ್ಲಗಳೆಯಲು ಪೂರಕವಾಗಿರುವುದಿಲ್ಲ. ತನಿಖಾಧಿಕಾರಿಯ ವರದಿ ಹಾಗೂ ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ.

9) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಯಾವ ಉದ್ದೇಶಕ್ಕಾಗಿ ಶ್ರೀಕಾಂತ್ ಎನ್ನುವವರ ಹೆಸರಿನಲ್ಲಿ ಚೆಕ್‌ನ್ನು ನೀಡಲಾಗಿದೆ ಮತ್ತು ಹಣ ದುರುಪಯೋಗವಾಗಿದೆಯೇ ಎಂಬುದನ್ನು ಪರಿಶೀಲಿಸಿ ಹಣ ದುರುಪಯೋಗವಾಗಿದ್ದಲ್ಲಿ ಹಣದ ವಸೂಲಾತಿಗೆ ಕ್ರಮ ಕೈಗೊಳ್ಳುವಂತೆ ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 16/8/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**